ಈ ಚಿತ್ರದಲ್ಲಿ ನಿರಂಜಾನಂದರು ಬರೀ ಲಂಗೋಟಿಯಲ್ಲಿ ಮತ್ತು ಇತರ ಸಂನ್ಯಾಸಿಗಳು ಕಾಷಾಯವಸ್ತ್ರದಲ್ಲಿರುವುದು ಅವರ ತೀವ್ರ ವೈರಾಗ್ಯವನ್ನು ತೋರಿಸುತ್ತಿದೆ.

ಚಿತ್ರ : ೭



**ಚಿತ್ರ ೭**

ಇದು ರಾಜಾಸ್ಥಾನದ ಜಯಪುರದಲ್ಲಿ ೧೮೯೧ ರಲ್ಲಿ ತೆಗೆದ ಚಿತ್ರ. ತಮಗೆ ಇಷ್ಟವಿಲ್ಲದಿದ್ದರೂ ಭಕ್ತಾದಿಗಳ ಕೋರಿಕೆಯ ಮೇರೆಗೆ ಸ್ವಾಮೀಜಿ ಈ ಫೋಟೋ ತೆಗೆಯಲು ಒಪ್ಪಿಗೆ ಕೊಟ್ಟರು. ಸ್ವಾಮಿ ವಿವೇಕಾನಂದರು ಪರಿವ್ರಾಜಕರಾಗಿ ಸಂಚಾರ ಮಾಡುವಾಗ ತೆಗೆದ ಮೊದಲ ಚಿತ್ರ ಇದು. ದಂಡಸಹಿತರಾಗಿ ನಿಂತಿರುವ ಸ್ವಾಮೀಜಿಯವರ ಈ ಚಿತ್ರ ಬಹಳ ಜನಪ್ರಿಯವಾಗಿ ಅನೇಕ ಭಕ್ತರ ಮನೆಗಳಲ್ಲಿ ವಿರಾಜಮಾನವಾಗಿದೆ. ೧೯೦೧ರಲ್ಲಿ ಪ್ರಕಟವಾದ ಸ್ವಾಮೀಜಿಯವರ Insprired Talks ಎಂಬ ಕೃತಿಗೆ ಈ ಚಿತ್ರವನ್ನೇ ಮುಖಪುಟವಾಗಿ ಬಳಸಲಾಗಿತ್ತು.

**ಚಿತ್ರ ೮**

ಇದು ಕೂಡ ೧೮೯೧ ರಲ್ಲಿ ಜಯಪುರದಲ್ಲಿ ತೆಗೆದ ಚಿತ್ರವೇ. ಇಲ್ಲಿ ವಿವೇಕಾನಂದರು ವೀರಸಂನ್ಯಾಸಿಯಂತೆ ನಿಂತಿದ್ದಾರೆ. ರಜಪುತಾನದಲ್ಲಿ ಸಂಚರಿಸುತ್ತಿದ್ದಾಗ ಅವರ ಭೇಟಿಗೆ ಬಂದ ಒಬ್ಬ ವ್ಯಕ್ತಿ, "ಸ್ವಾಮೀಜಿ, ನೀವು ಕಾವಿ ಧರಿಸಿರುವುದು ಏಕೆ?" ಎಂದು ಕೇಳುತ್ತಾನೆ. ಅದಕ್ಕೆ ಸ್ವಾಮೀಜಿ ಹೇಳುತ್ತಾರೆ, "ಇದು ಭಿಕ್ಷುಕರ ವೇಷ. ನಾನು ಬಿಳಿ ಬಟ್ಟೆ ತೊಟ್ಟುಕೊಂಡದ್ದೇ ಆದರೆ, ಇತರ ಭಿಕ್ಷುಕರು ನನ್ನನ್ನೂ ಭಿಕ್ಷೆ ಕೇಳುತ್ತಾರೆ. ಆದರೆ, ನಾನೇ ಸ್ವತಃ ಭಿಕ್ಷುಕನಾಗಿರುವುದರಿಂದ ಎಷ್ಟೋ ಸಲ ಒಂದು ಬಿಡಿಗಾಸೂ ನನ್ನ ಹತ್ತಿರ ಇರುವುದಿಲ್ಲ. ಭಿಕ್ಷೆ ಬೇಡಿದವರಿಗೆ 'ಇಲ್ಲ' ಎನ್ನಲು ನನ್ನ ಮನಸ್ಸಿಗೆ ನೋವಾಗುತ್ತದೆ. ಆದರೆ ನನ್ನ ಕಾವಿಬಟ್ಟೆಯನ್ನು ನೋಡಿ ಭಿಕ್ಷುಕರು ನಾನೂ ಒಬ್ಬ ಭಿಕ್ಷುಕನೆಂದೇ ತಿಳಿದುಕೊಳ್ಳುತ್ತಾರೆ. ಆದ್ದರಿಂದ ಅವರು ನನ್ನ ಬಳಿ ಬಂದು ಭಿಕ್ಷೆ ಬೇಡುವುದಿಲ್ಲ. ಭಿಕ್ಷುಕನ ಬಳಿಯೇ ಯಾರಾದರೂ ಭಿಕ್ಷೆ ಕೇಳುತ್ತಾರೆಯೇ?" ಸ್ವಾಮೀಜಿಯ ಈ ಉತ್ತರ ಮನಮುಟ್ಟುವಂತಿದೆ. ✳

ಚಿತ್ರ : ೮



# ಗುರುವಿನೊಡನೆ ದೇವರಡಿಗೆ

**ಆಧ್ಯಾತ್ಮಿಕ ಸಂಭಾಷಣೆ** **ಸ್ವಾಮಿ ಭೂತೇಶಾನಂದ**

**ಅನುವಾದ : ಸ್ವಾಮಿ ಮಂಗಳಾತ್ಮಾನಂದ**



**(ಹಿಂದಿನ ಪ್ರಶ್ನೆಗೆ ನೀಡಿದ ಉತ್ತರದಲ್ಲಿ ಸ್ವಾಮೀಜಿ, "ಕಣ್ಣೀರು ಹಾಕದೆ, ಭಗವತ್ಸಾಕ್ಷಾತ್ಕಾರ ಸಾಧ್ಯವೇ ಇಲ್ಲ" ಎಂಬ ಮಾತನ್ನು ಹೇಳಿದ್ದರು.)**

**ಪ್ರಶ್ನೆ: ಸ್ವಾಮೀಜಿ, ಜ್ಞಾನಮಾರ್ಗದಲ್ಲಿ ಸಾಧನೆ ಮಾಡುವವನು ಕೂಡ ಕಣ್ಣೀರು ಸುರಿಸುತ್ತಾನೆಯೇ?**

**ಸ್ವಾಮೀಜಿ :** ಕಣ್ಣೀರು ಸುರಿಸುವುದು ಎನ್ನುವುದು ಕೇವಲ ಸಾಂಕೇತಿಕ. ಇದರ ಅರ್ಥ ಬರೀ ಕಣ್ಣೀರು ಸುರಿಸುವುದಲ್ಲ, ದುಃಖ ಮತ್ತು ದಾರಿದ್ರ್ಯಗಳನ್ನು ಅನುಭವಿಸುವುದು. ಜ್ಞಾನಿಯೂ ಈ ಬಗೆಯ ಸಂಕಟಗಳನ್ನು ಅನುಭವಿಸಬೇಕಾಗುತ್ತದೆ. ಅವನ ವಿಷಯದಲ್ಲಿ ದುಃಖವೆಂಬುದು ಇನ್ನೂ ತೀವ್ರವಾಗಿರುತ್ತದೆ. ಜ್ಞಾನಿಯೇ ಆಗಲಿ, ಭಕ್ತನೇ ಆಗಲಿ, ಸಂಕಟಗಳನ್ನು ಅನುಭವಿಸದಿದ್ದರೆ ಏನೂ ಸಿದ್ಧಿಸದು. ಹೋರಾಟವೆಂಬುದು ಯಾವಾಗಲೂ ಆನಂದದಾಯಕವಾಗಿರುವುದಿಲ್ಲ.

**ಪ್ರಶ್ನೆ : ಸ್ವಾಮೀಜಿ, ವ್ಯಾಕುಲತೆ ಎಂದರೆ ಏನೆಂದು ತಿಳಿಸುವಾಗ, ಒಬ್ಬ ಗುರುವು ಶಿಷ್ಯನನ್ನು ನೀರಿನೊಳಗೆ ಮುಳುಗಿಸಿಬಿಡುವ ಉದಾಹರಣೆಯನ್ನು ಶ್ರೀರಾಮಕೃಷ್ಣರು ನೀಡುತ್ತಾರೆ. ಅನಂತರ ಆ ಶಿಷ್ಯನನ್ನು ಗುರುವು ಕೇಳುತ್ತಾನೆ: "ನಿನಗೆ ಹೇಗೆ ಅನ್ನಿಸುತ್ತಿದೆ?" ಅದಕ್ಕೆ ಶಿಷ್ಯನು ಉತ್ತರ ಕೊಡುತ್ತಾನೆ: "ನಾನು ಉಸಿರಿಗಾಗಿ ಬಹಳ ಒದ್ದಾಡುತ್ತಿದ್ದೆ." ಹಾಗಾದರೆ ವ್ಯಾಕುಲತೆ ಎನ್ನುವುದು ಇಷ್ಟೊಂದು ಕಷ್ಟವೇ? ಭಗವಂತನ ಸಾಕ್ಷಾತ್ಕಾರ ಪಡೆಯಬೇಕು ಎಂದರೆ ನಾವೆಲ್ಲರೂ ಸಂಕಟಪಡಲೇಬೇಕೆ?**

**ಸ್ವಾಮೀಜಿ:** ವ್ಯಾಕುಲತೆ ಎಂದರೇನೇ ತೀವ್ರವಾದ ಕಷ್ಟ ಪಡುವುದು. ವ್ಯಾಕುಲತೆ ಆನಂದದಾಯಕವಾದುದು ಅಲ್ಲ. ನಮ್ಮ ದೇಹ ನಮಗೆ ಅದೆಷ್ಟು ಪ್ರಿಯವಾದ ವಸ್ತು! ಯಾವುದಕ್ಕಾಗಿ ನಾವು ಸಂಸಾರದಲ್ಲಿ ಇದ್ದೇವೆಯೋ, ಯಾವುದು ನಮಗೆ ಬಹಳ ಆಕರ್ಷಕವೋ, ಅದನ್ನು ತುಚ್ಛಭಾವನೆಯಿಂದ ಕಾಣುವುದು ಮತ್ತು ಅಂತಹ ದೇಹದ ಬೋಧೆಯನ್ನು ಕತ್ತರಿಸಿ ಹಾಕುವುದು – ಇದು ಕಡಿಮೆ ಕಷ್ಟದ್ದೇನು?

**ಪ್ರಶ್ನೆ: ಸ್ವಾಮೀಜಿ, ಜಗತ್ತನ್ನು ನಿಕೃಷ್ಟವಾಗಿ ಕಾಣುವುದು ಕಷ್ಟದ ಕೆಲಸವೇ ಅಥವಾ ಜಗತ್ತನ್ನು ತುಚ್ಛಭಾವನೆಯಿಂದ ನೋಡಲಾಗುತ್ತಿಲ್ಲವಲ್ಲಾ ಎಂಬ ಭಾವನೆ ಕಷ್ಟವಾದುದೇ?**

**ಸ್ವಾಮೀಜಿ:** ಜಗತ್ತನ್ನು ತುಚ್ಛಭಾವನೆಯಿಂದ ನೋಡಲಾಗುತ್ತಿಲ್ಲ, ಭಗವತ್ಸಾಕ್ಷಾತ್ಕಾರ ಆಗುತ್ತಿಲ್ಲವೆಂಬ ಅಭಾವ ಬೋಧೆಯೇ ಅತಿ ಕಷ್ಟವನ್ನು ಕೊಡುವಂಥದ್ದು. ನೋಡಿ, ಶ್ರೀರಾಮಕೃಷ್ಣರು ಎಂತಹ ಆನಂದಮಯರು! ಆದರೆ ಅವರೇ ತೋರಿಸಿಕೊಟ್ಟಿದ್ದಾರೆ, ದೇವರ ಸಾಕ್ಷಾತ್ಕಾರವನ್ನು ಮಾಡಿಕೊಳ್ಳಲು ಎಷ್ಟೊಂದು ಕಷ್ಟಪಡಬೇಕೆಂದು. ಅವರು ಎಷ್ಟೊಂದು ನೋವನ್ನು ಅನುಭವಿಸಿದರು! ಅವರು ನೆಲದ ಮೇಲೆ ಬಿದ್ದುಕೊಂಡು, ಮುಖವನ್ನು ನೆಲಕ್ಕೆ ಉಜ್ಜಿ ಉಜ್ಜಿ ಅತ್ತಿದ್ದಾರೆ!

**ಒಬ್ಬ ಸಾಧುಗಳು: ಹೌದು ಸ್ವಾಮೀಜಿ, ಪರಮಹಂಸರ ಆನಂದ ಮತ್ತು ಮಮತೆಗಳನ್ನು ನಾವು ನೋಡುವುದು ಅವರ ಸಾಧನೆಯ ಉತ್ತರಕಾಲದಲ್ಲಿ. ಸಾಧನಾಕಾಲದಲ್ಲಿ ಅವರು ತುಂಬಾ ನೋವನ್ನು ಅನುಭವಿಸಿದ್ದಾರೆ, ಅತ್ತಿದ್ದಾರೆ. ಅವರು ಸಾಧನೆಯ ವಿಷಯದಲ್ಲಿ ಬಹಳ ಗಂಭೀರವಾಗಿದ್ದರು.**

**ಸ್ವಾಮೀಜಿ:** ಸರಿಯಾಗಿಯೇ ಹೇಳಿದ್ದೀಯೆ. (ಸ್ವಲ್ಪ ಸಮಯ ಬಿಟ್ಟು) ಎರಡು ಪುಟಗಳಷ್ಟು 'ವೇದಾಂತಸಾರ' ಗ್ರಂಥವನ್ನು ಓದಿದಾಕ್ಷಣ ಜ್ಞಾನಿಗಳಾಗುತ್ತೀರೆಂದು ಭಾವಿಸಬೇಡಿ. ಮನೆ ಬಿಟ್ಟು ಬಂದಾಕ್ಷಣ ಎಲ್ಲವನ್ನೂ ಸಾಧಿಸಿದ್ದೇನೆಂದು ತಿಳಿಯಬೇಡಿ. ಇದು ಏನೇನೂ ಅಲ್ಲ. ಪುಷ್ಕಳವಾದ ಭೋಜನ ಮತ್ತು ಉಡುಗೆ-ತೊಡುಗೆಗಳ ಆಸೆ – ಇವು ಸ್ಥೂಲಭೋಗ ಎನಿಸಿಕೊಳ್ಳುತ್ತವೆ. ಇವನ್ನು ಬಿಟ್ಟು ಇನ್ನೂ ಎಷ್ಟೋ ಸೂಕ್ಷ್ಮವಾದ ವಿಷಯವಾಸನೆಗಳಿವೆ. "ಯಾರೂ ನನ್ನನ್ನು ಗಮನಕ್ಕೆ ತೆಗೆದುಕೊಳ್ಳುತ್ತಿಲ್ಲ. ನನಗೆ ಮಾನ-ಸಮ್ಮಾನಗಳು ಸಿಗುತ್ತಿಲ್ಲ"– ಇಂತಹ ಆಲೋಚನೆಗಳೂ ಕೂಡ ಭೋಗವಾಸನೆಗಳೇ. ನಮ್ಮನ್ನು ಯಾರಾದರೂ ಹೊಗಳಿದರೆ ನಮ್ಮ ಮನಸ್ಸಿಗೆ ತುಂಬಾ ಸಂತೋಷವಾಗುತ್ತದೆ. ಏಕೆ ಹೀಗಾಗುತ್ತದೆ? ಇದಕ್ಕೆ ಕಾರಣ ನಮ್ಮೊಳಗಿರುವ ಭೋಗವಾಸನೆ. ಜಗತ್ತಿನ ವಿಷಯದಲ್ಲಿ ನಮಗೆ ವೈರಾಗ್ಯ ಬಂದಿದೆಯೇನು? ಸಂಸಾರವೆಂಬುದು ಅತಿ

ತುಚ್ಛವಾದುದು ಎಂಬ ನಿಶ್ಚಯಭಾವನೆ ನಮ್ಮ ಮನಸ್ಸಿನಲ್ಲಿ ಮೂಡಿದೆಯೇನು? ಅವೆಲ್ಲ ಹೋಗಲಿ, ಊಟದ ಎಲೆಯಲ್ಲಿ ದೊಡ್ಡ ದೊಡ್ಡ ರಸಗುಲ್ಲಾಗಳನ್ನು ಬಡಿಸಿದಾಗ, ಜಗತ್ತು ತುಚ್ಛ ಎಂಬ ವೈರಾಗ್ಯಭಾವನೆ ಬರುತ್ತದೆಯೇ?

(*ಸ್ವಲ್ಪ ಕಾಲದ ಮೌನದ ನಂತರ*) ವಾಸ್ತವ ಸಂಗತಿ ಏನೆಂದರೆ, ಈ ಬಗೆಯ ತೀವ್ರ ವೈರಾಗ್ಯ ಎಷ್ಟೋ ಜನರಿಗೆ ಜೀವನವಿಡೀ ಬರುವುದಿಲ್ಲ. ಹಾಗೆಂದು ನಮ್ಮೊಳಗೆ ಯಾರೂ ಪ್ರಾಮಾಣಿಕರಾದವರೇ ಇಲ್ಲ ಎಂದೇನೂ ನಾನು ಹೇಳುವುದಿಲ್ಲ. ಆದರೆ ಮೇಲೆ ಹೇಳಿದ ರೀತಿಯಲ್ಲಿ ತೀವ್ರವಾದ ಶ್ರದ್ಧೆ ಇರದಿದ್ದರೆ ಏನೂ ಆಗದು. ಇದಂತೂ ಸತ್ಯ. ಹಾಗಾದರೆ ನಾವು ಮಾಡಬೇಕಾದ್ದೇನು? ಈ ಬಗೆಯ ಉತ್ಕಟತೆ, ತೀವ್ರವಾದ ಶ್ರದ್ಧೆ ಇಲ್ಲವೆಂದು ಸುಮ್ಮನೆ ಕುಳಿತುಕೊಳ್ಳುವುದೆ? ವ್ಯಾಪಾರಿಗಳು ದೊಡ್ಡ ವ್ಯಾಪಾರ ಮಾಡಲು ಬೇಕಾದ ಬಹುದೊಡ್ಡ ಬಂಡವಾಳವಿಲ್ಲವೆಂದು ಹಾಗೆಯೇ ಕುಳಿತುಕೊಳ್ಳುವರೇನು? ತಮ್ಮಲ್ಲಿ ಇರುವ ಅಲ್ಪಸ್ವಲ್ಪ ಬಂಡವಾಳದಿಂದಲೇ ಅವರು ವ್ಯಾಪಾರ ಆರಂಭಿಸಬೇಕಾಗುತ್ತದೆ. ಹೀಗೆಯೇ ಸಾಧನೆಯಲ್ಲಿಯೂ ಕೂಡ. ನಿಧಾನವಾಗಿ ನಿಯಮಾನುಷ್ಠಾನ ಮಾಡುತ್ತ, ಅವುಗಳ ಸಹಾಯದಿಂದ ಭಗವಂತನ ಕಡೆಗೆ ಮುಂದುವರಿಯಲು ಪ್ರಯತ್ನಿಸಬೇಕು. ಕ್ರಮೇಣ ಅದರಲ್ಲಿಯೇ ಉತ್ಕಟತೆ ಕಾಣಿಸಿಕೊಳ್ಳುತ್ತದೆ; ತೀವ್ರ ಶ್ರದ್ಧೆ ಉತ್ಪನ್ನವಾಗುತ್ತದೆ. ಇದನ್ನು ಬಿಟ್ಟು ಬೇರೆ ಯಾವ ಉಪಾಯ ತಾನೇ ಇದೆ?

ಭಗವಂತನ ಕೃಪೆಯ ಬಗ್ಗೆ ಬಹಳ ಜನ ಮಾತನಾಡುತ್ತಾರೆ. ನಾನು ಹೇಳುತ್ತೇನೆ, 'ಕೃಪೆ' ಎನ್ನುವುದು ಆತನಿಗೆ ಬಿಟ್ಟದ್ದು. ಆತ ಕೃಪೆ ಮಾಡುತ್ತಾನೆಯೋ, ಬಿಡುತ್ತಾನೆಯೋ ಆತನಿಗೆ ಸೇರಿದ್ದು. ಈಗ ನಾವೇನು ಮಾಡಿದ್ದೇವೆ? ನಮ್ಮ ಸಲುವಾಗಿಯಾದರೂ ನಾವು ಏನನ್ನಾದರೂ ಮಾಡಬಾರದೇ? ಭಗವಂತನು ನಮಗಾಗಿ ಏನನ್ನೂ ಮಾಡುತ್ತಿಲ್ಲವೆಂದು, ಆತನ ವಿಷಯದಲ್ಲಿ ಲೆಕ್ಕಾಚಾರದ ಬುದ್ಧಿ ಏಕೆ? ಆತನು ಕೃಪೆ ಮಾಡಲು ನಾವು ಏನುತಾನೇ ಮಾಡುತ್ತಿದ್ದೇವೆ? ಪರಿಸ್ಥಿತಿ ಹೀಗಿರುವಾಗ ಅವನ ಲೆಕ್ಕಾಚಾರದ ಬಗ್ಗೆ ನಾವು ಹೇಗೆ ತಾನೇ ದೂರಲಾದೀತು? ನನಗೆ ಎಷ್ಟೋ ಜನ ಹೇಳುತ್ತಾರೆ, "ಭಗವಂತ ಮಾಡಿಸಿದರೆ ಅಥವಾ ತಾವು (ಗುರು) ಮಾಡಿಸಿದರೆ ಮಾಡುತ್ತೇನೆ." ಅಂದರೆ ನಮ್ಮ ಸ್ವಂತ ಪ್ರಯತ್ನದ ಸಾಮರ್ಥ್ಯ (ಕರ್ತೃತ್ವಶಕ್ತಿ) ನಮ್ಮಿಂದ ಸಂಪೂರ್ಣ ಹೊರಟುಹೋಗಿದೆ!

**ಪ್ರಶ್ನೆ: ಸ್ವಾಮೀಜಿ, ಜಪಧ್ಯಾನಗಳಲ್ಲಿ ಪ್ರಾಮಾಣಿಕತೆ ಹೇಗೆ ಬರುತ್ತದೆ?**

**ಸ್ವಾಮೀಜಿ:** 'ಪ್ರಾಮಾಣಿಕ'ರಾಗಿದ್ದರೆ 'ಪ್ರಾಮಾಣಿಕತೆ' ಬರುತ್ತದೆ.

**ಪ್ರಶ್ನೆ: ಹಾಗಾದರೆ, ನಾವು ಸಾಧುಗಳು ಜಪಧ್ಯಾನ ಮಾಡಲು ಪ್ರಯತ್ನಪಡುತ್ತೇವಲ್ಲ, ಅದರಲ್ಲಿ ಅಶ್ರದ್ಧೆ ತೋರುತ್ತಿದ್ದೇವೆಯೇ?**

**ಸ್ವಾಮೀಜಿ:** ಹಾಗಲ್ಲ. ಅಶ್ರದ್ಧೆ ಇದ್ದಕಡೆ ವ್ಯಾಪಾರಬುದ್ಧಿ ಇರುತ್ತದೆ. ಅದು ಹೇಗೆಂದರೆ, "ಇದು ಪ್ರತಿಷ್ಠೆಯ ವಿಷಯ", "ನಾನು ದೊಡ್ಡ ಸಂನ್ಯಾಸಿ" ಎಂದು ಆಲೋಚನೆ ಮಾಡಿಕೊಂಡು ಕೀರ್ತಿ ಮಾನ್ಯತೆಯ ಆಸೆಗಳನ್ನು ಇಟ್ಟುಕೊಂಡು ಜಪ ಧ್ಯಾನ ಮಾಡುವುದು. ಆದರೆ ಸಾಮಾನ್ಯವಾಗಿ ಸಾಧುಗಳು (ಹಾಗೆ ಒಂದೆರಡು ಜನ ಇರಬಹುದು, ಅವರನ್ನು ಬಿಟ್ಟುಹೇಳುವುದು) ಅಶ್ರದ್ಧೆಯಿಂದ ಜಪಧ್ಯಾನ ಮಾಡುತ್ತಾರೆಂದು ಹೇಳಲಾಗದು. ಆದರೆ ಅದು ಬಹಳ ಮಂದಗತಿಯಲ್ಲಿ ಆಗುತ್ತಿದೆ; ಸಾಧನೆ ತಾಮಸ ಮನೋಭಾವದಿಂದ, ಸೋಮಾರಿತನದಿಂದ ನಡೆಯುತ್ತಿದೆ; ಜಾಗೃತರಾಗದೆ ನಡೆಯುತ್ತಿದೆ. ಜಪಧ್ಯಾನಗಳಲ್ಲಿ ಮನಸ್ಸನ್ನು ತೊಡಗಿಸಿಕೊಳ್ಳಲು ನಮಗೆ ಆಗುತ್ತಿಲ್ಲ. ಮನಸ್ಸಿನ ಜಡತೆಯಿಂದಾಗಿ ಸಮಯದ ಬಹುಭಾಗವನ್ನು ನಿದ್ದೆಯಲ್ಲಿಯೇ ನಾವು ಕಳೆಯುತ್ತೇವೆ. ಅಧಿಕ ಜನರ ಸಮಸ್ಯೆಯೆ ಇದು.

ಏಕೆ ಹೀಗಾಗುತ್ತದೆ? ಕಾರಣವಿಷ್ಟೇ, ವ್ಯಾಕುಲತೆ ಮತ್ತು ತೀವ್ರಾಕಾಂಕ್ಷೆಗಳ ಅಭಾವ. ಇದನ್ನೇ **'ಅಭಾವ ಬೋಧೆ'** ಎನ್ನುವುದು. ನಮ್ಮಲ್ಲಿ ಚುರುಕುತನ ಎಲ್ಲಿದೆ? ಈ ಚುರುಕುತನ ಇದ್ದರೆ ನಿದ್ದೆ ಮಾಡಲು ಸಾಧ್ಯವೆ? ಪರಮಹಂಸರು ಹೇಳುವ ಹಾಗೆ ಪಕ್ಕದ ಕೋಣೆಯಲ್ಲಿ ಚಿನ್ನ ಅಡಗಿಸಿಟ್ಟದ್ದು ಗೊತ್ತಾದರೆ, ಕಳ್ಳನು ನಿಶ್ಚಿಂತೆಯಾಗಿ ನಿದ್ದೆಮಾಡುತ್ತಾನೆಯೋ ಅಥವಾ ಹೇಗೆ ಈ ಗೋಡೆಗೆ ಕನ್ನಹಾಕಿ ಚಿನ್ನವನ್ನು ಅಪಹರಿಸಬಹುದೆಂದು ಚಿಂತಿಸುತ್ತಾನೆಯೋ?

ಈಗ ವಿಷಯವೆಂದರೆ, ನಮಗೆ ಈ ತರಹದ ವ್ಯಾಕುಲತೆ ಇಲ್ಲವೆಂದು ಸುಮ್ಮನೆ ಕುಳಿತುಕೊಳ್ಳುವುದೆ, ಇಲ್ಲವೇ ಏನಾದರೂ ಪ್ರಯತ್ನಮಾಡುವುದೆ? ಬಂಡವಾಳ ಇಲ್ಲವೆಂದು ಚಿಂತೆಮಾಡುತ್ತ ವೃಥಾ ಪ್ರಲಾಪ ಏಕೆ ಮಾಡಬೇಕು? ಕೈಯಲ್ಲಿರುವ ಒಂದೆರಡು ಕಾಸುಗಳಿಂದಲೇ ಪ್ರಯತ್ನ ಮಾಡಬಹುದಲ್ಲವೆ? ಇದಕ್ಕೆ ಪರಿಹಾರವಿಷ್ಟೇ. ಪ್ರಯತ್ನ ಮಾಡುತ್ತಾ ಮಾಡುತ್ತಾ ವ್ಯಾಕುಲತೆ ಕ್ರಮೇಣ ಬರುತ್ತದೆ. ಯಾವ ರೀತಿಯ ಪ್ರಯತ್ನ? ಪ್ರಾಮಾಣಿಕ ಪ್ರಯತ್ನ. ವ್ಯಾಕುಲತೆ ಬರುವುದು ಈ ರೀತಿಯಲ್ಲಿಯೇ. ಜಪಧ್ಯಾನಗಳಿಗೆ ಕುಳಿತುಕೊಳ್ಳುತ್ತೇವೆ. ಆದರೆ ಅದರ ಹೆಚ್ಚಿನ ಸಮಯ ಎಚ್ಚರವಿಲ್ಲದೆ ಹಾಗೆಯೇ ಕಳೆದುಹೋಗುತ್ತದೆ. ಇದರಿಂದ ಎಷ್ಟೊಂದು ಸಮಯ ವ್ಯರ್ಥವಾಗುತ್ತಿದೆ, ನೋಡಿ.

**ಪ್ರಶ್ನೆ: ಸ್ವಾಮೀಜಿ, ನಿರ್ದಿಷ್ಟ ಸಮಯದಲ್ಲಿ ನಿರ್ದಿಷ್ಟ ಸಂಖ್ಯೆಯ ಜಪಮಾಡಲು ಪ್ರಯತ್ನಿಸಿದರೆ, ಆಗ ಸಮಯದ ಸದುಪಯೋಗ ವಾಗುತ್ತದೆಯಲ್ಲವೆ?**

**ಸ್ವಾಮೀಜಿ :** ಜಪ ಮತ್ತು ಧ್ಯಾನಗಳನ್ನು ಅನೇಕ ವಿಧದಲ್ಲಿ ಮಾಡಬಹುದು. ಆದರೆ ತಿಳಿದುಕೊಳ್ಳಬೇಕಾದ ನಿಜ ಸಂಗತಿಯೆಂದರೆ ಯಾವಾಗಲೂ ಪ್ರಜ್ಞಾವಂತರಾಗಿರುವುದು, ಜಾಗೃದವಸ್ಥೆಯಲ್ಲಿರುವುದು. ಜಾಗೃದವಸ್ಥೆಯಲ್ಲಿರಲು ಪ್ರಯತ್ನಪಟ್ಟರೆ ಎಷ್ಟೋ ಸಾಧಿಸಲು ಸಾಧ್ಯ! ಅದಿಲ್ಲದೆ ಎರಡು ಘಂಟೆ ಆಸನದ ಮೇಲೆ ಕುಳಿತರೂ ಏನೂ ಆಗದು, ಪ್ರಜ್ಞೆ ಇರಲೇಬೇಕು. ನಾವು ಸಮಯ ಸಿಗುವುದಿಲ್ಲವೆಂದು ಹೇಳುತ್ತೇವೆ! ಆದರೆ ಪ್ರಜ್ಞೆ